16. ಜಿಲ್ಲಾ ಆಹುಕ, ಅಧಿಕಾರಿ, ಮಂಗಳೂರು ದ.ಕ ಜಿಲ್ಲೆ	2	1	1
17. ಜಿಲ್ಲಾ ಆಹುಕ ಅಧಿಕಾರಿ ಉಡುಪಿ	5	4	1
18. ಜಿಲ್ಲಾ ಆಹುಕ ಅಧಿಕಾರಿ, ಬೆಳಗಾವಿ	15	11	4
19. ಜಿಲ್ಲಾ ಆಹುಕ ಅಧಿಕಾರಿ, ಧಾರವಾಡ	0	0	0
20. ಜಿಲ್ಲಾ ಆಹುಕ ಅಧಿಕಾರಿ, ಕಾರವಾರ	1	0	1
21. ಜಿಲ್ಲಾ ಆಹುಕ ಅಧಿಕಾರಿ, ಗದಗ	1	1	0
22. ಜಿಲ್ಲಾ ಆಹುಕ ಅಧಿಕಾರಿ, ಹಾವೇರಿ	9	7	2
23. ಜಿಲ್ಲಾ ಆಹುಕ ಅಧಿಕಾರಿ, ಬಾಗಲಕೋಟೆ	2	1	1
24. ಜಿಲ್ಲಾ ಆಹುಕ ಅಧಿಕಾರಿ, ಬಿಜಾಪುರ	4	4	0
25. ಜಿಲ್ಲಾ ಆಹುಕ ಅಧಿಕಾರಿ, ಗುಲ್ಬರ್ಗಾ	2	0	2
26. ಜಿಲ್ಲಾ ಆಹುಕ ಅಧಿಕಾರಿ, ಯಾದಗಿರಿ	1	1	0
27. ಜಿಲ್ಲಾ ಆಹುಕ ಅಧಿಕಾರಿ, ಬೀದರ್	0	0	0
28. ಜಿಲ್ಲಾ ಆಹುಕ ಅಧಿಕಾರಿ, ರಾಯಚೂರು	3	1	2
29. ಜಿಲ್ಲಾ ಆಹುಕ ಅಧಿಕಾರಿ, ಕೊಪ್ಪಳ	5	3	2
30. ಜಿಲ್ಲಾ ಆಹುಕ ಅಧಿಕಾರಿ, ಬಳ್ಳಾರಿ	2	2	0
ಒಟ್ಟು	**140**	**89**	**51**

ಅಮೃತ ಯೋಜನೆಯಡಿಯಲ್ಲಿ ಮಹಿಳೆಯರಿಗೆ ಸಹಾಯ ಧನ

272(375) ಶ್ರೀ ರಹೀಂ ಖಾನ್ (ಬೀದರ್) :– ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

(ಅ) ಅಮೃತ ಯೋಜನೆಯಡಿಯಲ್ಲಿ ವಿಧವೆಯರು ಮತ್ತು ದೇವದಾಸಿ ಮಹಿಳೆಯರು ಗೌರವಯುತ ಜೀವನ ನಡೆಸಲು ಅನುಕೂಲವಾಗುವಂತೆ ಹಾಲು ಕರೆಯುವ ಹಸು ಹಾಗೂ ಎಮ್ಮೆಯನ್ನು ಖರೀದಿಸಲು ಸಹಾಯ ಧನವನ್ನು ನೀಡುವ ಯೋಜನೆ ಸರ್ಕಾರದ ಮುಂದಿದೆಯೇ?

(ಆ) ಹಾಗಿದ್ದರೆ, ಈ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆ ಹಾಗೂ ಬೀದರ್ ವಿಧಾನ ಸಭಾ ಮತಕ್ಷೇತ್ರಕ್ಕೆ ಎಷ್ಟು; ಫಲಾನುಭವಿಗಳಿಗೆ ಎಷ್ಟೆಷ್ಟು ಸಹಾಯ ಧನ ನೀಡಲಾಗಿದೆ? (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಈ ಯೋಜನೆಯಡಿಯಲ್ಲಿ ಸಹಾಯ ಧನವನ್ನು ನೀಡದಿದ್ದಲ್ಲಿ ಯಾವಾಗ ಮತ್ತು ಎಷ್ಟು ಫಲಾನುಭವಿಗಳಿಗೆ ಸಹಾಯ ಧನವನ್ನು ಒದಗಿಸಲಾಗುವುದು (ಮಾಹಿತಿ ಒದಗಿಸುವುದು)

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು):–

(ಅ) ಹೌದು]

(ಆ) ಈ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಬಿಡುಗಡೆಯಾದ ಸಹಾಯ ಧನ ಮತ್ತು ಫಲಾನುಭವಿಗಳ ಸಂಖ್ಯೆ ಈ ಕೆಳಕಂಡಂತಿದೆ.

ವರ್ಷ	ಫಲಾನುಭವಿಗಳ ಸಂಖ್ಯೆ	ರೂ. ಲಕ್ಷಗಳಲ್ಲಿ
2007–08	859	89.91
2008–09	296	22.08
2009–10	217	22.86
2010–11	70	12.90

ಈ ಯೋಜನೆಯಡಿ ಬೀದರ್ ವಿಧಾನಸಭಾ ಮತಕ್ಷೇತ್ರಕ್ಕೆ ಬಿಡುಗಡೆಯಾದ ಸಹಾಯ ಧನ ಮತ್ತು ಫಲಾನುಭವಿಗಳ ಸಂಖ್ಯೆ ಈ ಕೆಳಕಂಡಂತಿದೆ.

ವರ್ಷ	ಫಲಾನುಭವಿಗಳ ಸಂಖ್ಯೆ	ರೂ. ಲಕ್ಷಗಳಲ್ಲಿ
2007–08	11	1.18
2008–09	14	1.55
2009–10	11	1.18
2010–11	07	0.72

(ಇ) 20011–12ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ 44 ಫಲಾನುಭವಿಗಳಿಗೆ ವಿತರಿಸಲು ಒಕ್ಕೂಟಕ್ಕೆ ರೂ. 8.49 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಫಲಾನುಭವಿಗಳ ಆಯ್ಕೆ ಪ್ರಗತಿಯಲ್ಲಿದ್ದು ರಾಸುಗಳ ಖರೀದಿಗೆ 2 ರಿಂದ3 ತಿಂಗಳ ಅವದಿ ನೀಡಲಾಗಿದೆ. 2012–13ನೇ ಸಾಲಿನಲ್ಲಿ 60 ಫಲಾನುಭವಿಗಳಿಗೆ ವಿತರಿಸಲು ರೂ. 10.68 ಲಕ್ಷಗಳ ಸಹಾಯಧನವನ್ನು ಒದಗಿಸಲಾಗಿದೆ.